Ex.ನಂ.18/2022
ಡಿ.ಡಬ್ಲ್ಯೂ -01

**ಸಾಕ್ಷಿಯನ್ನು ದಿಃ 17.01.2026 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ objector ಪರ ಶ್ರೀ. B.R.R. ವಕೀಲರಿಂದ.**

ಈ ಪ್ರಕರಣದ ಡಿಕ್ರಿ ಹೋಲ್ಡರ್ ನನ್ನ ಸಾಕು ತಾಯಿ ಆಗಬೇಕು. ಅವರಿಗೆ 63 ವರ್ಷ ವಯಸ್ಸಾಗಿದೆ. ಅವರ ಗಂಡ ಮರಣ ಹೊಂದಿದ್ದು ಅವರಿಗೆ ಮಕ್ಕಳು ಇರುವುದಿಲ್ಲ ಅವರು ನಮ್ಮನ್ನು ಸಾಕಿಕೊಂಡು ಇರುತ್ತಾರೆಂದು ಹೇಳುತ್ತಾರೆ. ಈ ಪ್ರಕರಣವನ್ನು ಹೊರತು ಪಡಿಸಿ ಡಿಕ್ರಿ ಹೋಲ್ಡರ್ ಅವರು ಎಷ್ಟು ಸಿವಿಲ್ ಮತ್ತು ಕ್ರಿಮಿಲನ್ ಪ್ರಕರಣದಲ್ಲಿ ಭಾಗಿ ಆಗಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ. ಡಿಕ್ರಿ ಹೋಲ್ಡರ್ ಅವರೇ ನ್ಯಾಯಾಲಯಕ್ಕೆ ಹಾಜರಾಗಿದ್ದಲ್ಲಿ ಅವರಿಗೆ ಎಷ್ಟು ಪ್ರಕರಣಗಳಲ್ಲಿ ಬಾಗಿ ಆಗಿರುತ್ತದೆಂದು ಮಾಹಿತಿ ಇರುತ್ತದೆ ಎಂದರೆ ಸರಿ.

ಈ ಪ್ರಕರಣ ತೀರ್ಪು ಋಣಿಗಳು ಮತ್ತು ತಕರಾರುದಾರರು ಯಾರು ಎಂದು ನನಗೆ ಗೊತ್ತು. ಅವರು ಲೀಲಾವತಿ ಮತ್ತು ವೆಂಕಟೇಶ ಆಗಿರುತ್ತಾರೆ. ನನ್ನ ತಾಯಿ ನನಗೆ ವೆಂಕಟೇಶ ಅವರು ತಕರಾರುದಾರರು ಆಗಿರುತ್ತಾರೆಂದು ನನಗೆ ಹೇಳಿರುತ್ತಾರೆ. ಅವರನ್ನು ನಾನು ನೋಡಿರುತ್ತೇನೆ. ಅವರು ಈ ದಿನ ನ್ಯಾಯಾಲಯದಲ್ಲಿ ಇರುವುದಿಲ್ಲ.  ವೆಂಕೇಟಶ್ ಅವರು ತಕರಾರುದಾರರು ಎಂದು ನಾನು ಖುದ್ದಾಗಿ ನೋಡಿ ಪರಾಮರ್ಶಿಸಿರುತ್ತೇನೆ. ಈ ಪ್ರಕರಣದಲ್ಲಿ ಕುಮಾರು ಅವರ ಕೆ.ಕೆ. ಎನ್ನುವವರು ತಕರಾರುದಾರರಾಗಿದ್ದು ವೆಂಕಟೇಶ ಎನ್ನುವವರು ಆಗಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ವ್ಯಕ್ತಿಯನ್ನು ನಾನು ನೋಡಿದ್ದು ಅವರು ವೆಂಕಟೇಶ ಅವಶ ತಮ್ಮ ಆಗಿರುತ್ತಾರೆ. ಸಾಕ್ಷಿ ಮುಂದುವರೆದು ಅವರಿಗೆ ವೆಂಕಟೇಶ ಅವರು ದಾನ ಪತ್ರ ಬರೆದುಕೊಟ್ಟಿರುತ್ತಾರೆಂದು ಹೇಳುತ್ತಾರೆ. ನಾನು ಈ ಅರ್ಜಿಯ ಸ್ವತ್ತನ್ನು ನಾನು ನೋಡಿರುತ್ತೇನೆ. ನಾನು ಸದರಿ ಸ್ವತ್ತನ್ನು 8-10 ವರ್ಷಗಳಿಂದ ನೋಡಿರುತ್ತೇನೆ.

ಸದರಿ ಸ್ವತ್ತಿನಲ್ಲಿ ಈಗ 8-10 ವರ್ಷಗಳಿಂದ ಹಾಲೋಬ್ರೇಕ್ಸ್ ಪ್ಯಾಕ್ಟರಿಯನ್ನು ಕೆ.ಕೆ. ವೆಂಕಟೇಶ ಅವರು ನಡೆಸುತ್ತಿದ್ದಾರೆ. ಲೀಲಾವತಿ ಮತ್ತು ವೆಂಕಟೇಶ ಅವರು ಎಷ್ಟು ವರ್ಷಗಳಿಂದ ಬೇರೆ ಬೇರೆ ಇದ್ದಾರೆಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲವೆಂದು ಹೇಳಿ ನಂತರ ಇಬ್ಬರು ಜೊತೆಯಲ್ಲಿದ್ದಾರೆಂದು ಹೇಳುತ್ತಾರೆ. ನಾನು ಅವಬ್ಬರೂ ಜೊತೆಯಲ್ಲಿರುವುದರಿಂದ ನೋಡಿರುತ್ತೇನೆ. ಅವರು ಹು.ದುರ್ಗದ ಕಂಪ್ಲಾಪುರ ಗ್ರಾಮದಲ್ಲಿ ಇರುತ್ತಾರೆ.

ಸದರಿ ಗ್ರಾಮದಲ್ಲಿ 2015 ರಿಂದ ಇಲ್ಲಿಯವರೆಗೂ ನಾನು ನೋಡಿರುತ್ತೇನೆ. ಈ ಅರ್ಜಿಯಲ್ಲಿ ಡಿಕ್ರಿ ಹೋಲ್ಡರ್ ಅವರು ಹು.ದುರ್ಗದ ವಿಳಾಸವನ್ನು ನೀಡಿರುತ್ತಾರೆ. ಕಂಪ್ಲಾಪುರ ವಿಳಾಸ ನೀಡಿರುವುದಿಲ್ಲ. ಬಾಲಾಜಿ ಹಾಲೋಬ್ಬೇಕ್ಸ ಕಂಪನಿ ಹು.ದುರ್ಗ ಹಸಿಗೆ ಹೋಬಳಿಯಲ್ಲಿರುತ್ತದೆ. ಹು.ದುರ್ಗ ಮತ್ತು ಕಂಪ್ಲಾಪುರಕ್ಕೆ 2 ಕೀ ಮೀಟರ ಅಂತರ ಇರುತ್ತದೆ.

ಕುಮಾರ ಮತ್ತು ವೆಂಕಟೇಶ ಅವರ ಹುಟ್ಟು ವಾಸ ಸ್ಥಳ ಕಂಪ್ಲಾಪುರ ಆಗಿರುತ್ತದೆ ಎಂದರೆ ಸರಿ. ಅವರು ಕಂಪ್ಲಾಪುರ ಗ್ರಾಮವನ್ನು ಹೊರತು ಪಡಿಸಿ ನೀವು ಕಂಡಂತೆ ಬೇರೆ ಕಡೆ ವಾಸ ಇರಲಿಲ್ಲವೆಂದರೆ ಸಾಕ್ಷಿ ಬೇರೆ ಕಡೆ ವಾಸ ಇದ್ದರು ಎಂದು ಹೇಳುತ್ತಾರೆ. ಅವರು ಹು.ದುರ್ಗ ಹಳೇವೂರು ರಸ್ತೆಯಲ್ಲಿ ವಾಸ ಇದ್ದರು ಎಂದು ಹೇಳುತ್ತಾರೆ. ಯಾವ ವರ್ಷದಿಂದ ಯಾವ ವರ್ಷದವರೆಗೆ ವಾಸ ಇದ್ದರು ಎಂದು ನನಗೆ ಸರಿಯಾಗಿ ಮಾಹಿತಿ ಇರುವುದಿಲ್ಲ. ಈ ವಿಚಾರ ಡಿಕ್ರಿ ಹೋಲ್ಡರ್ ಅವರು ಬಂದಿದ್ದಲ್ಲಿ ಅವರಿಗೆ ಸರಿಯಾಗಿ ಗೊತ್ತಿರುತ್ತಿತ್ತು ಎಂದರೆ ಸರಿ.

ಹಾಲೋಬ್ರಿಕ್ಸ ಪ್ಯಾಕ್ಟರಿ 1525004020001820226 ನೇದರಲ್ಲಿ ನಡೆಯುತ್ತದೆ ಎಂದರೆ ಸರಿ. ಹಾಲೋಬ್ರಿಕ್ಸ ಪ್ಯಾಕ್ಟರಿ ಭೂ ಪರಿವರ್ತಿತ ಜಾಗದಲ್ಲಿ ನಡೆಯುತ್ತಿದೆ ಎಂದರೆ ಸಾಕ್ಷಿ 2015 ರಲ್ಲಿ ಲೀಲಾವತಿಯವರು ಭೂ ಪರಿವರ್ತನೆಗಾಗಿ ಅರ್ಜಿ ಸಲ್ಲಿಸಿದ್ದು ಹಾಲೊಬ್ರಿಕ್ಸ ಪ್ಯಾಕ್ಟರಿ ಎಲ್ಲಿ ನಡೆಯುತ್ತದೆಂದು ನನಗೆ ಗೊತ್ತಿಲ್ಲ.

ಈ ಸ್ವತ್ತು ಮೂಲತಃ ಕುಮಾರ ಮತ್ತು ವೆಂಕಟೇಶ ಅವರ ತಂದೆ ಹೆಸರಿಗೆ ಇತ್ತು ಎಂದರೆ ಸಾಕ್ಷಿ ಸದರಿ ಸ್ವತ್ತು ನಮಗೆ ಮಾಹಿತಿ ಇರುವ ಪ್ರಕಾರ ಲೀಲಾವತಿ ಮತ್ತು ವೆಂಕಟೇಶ ಅವರ ಹೆಸರಿಗೆ ಇತ್ತು ಎಂದು ಹೇಳುತ್ತಾರೆ. ಕುಮಾರ ಕೆ.ಕೆ. ಅವರು ಈ ಪ್ರಕರಣದಲ್ಲಿ ಸಲ್ಲಿಸಿದ ದಾಖಲೆಗಳು ಬಗ್ಗೆ ತಿಳಿದುಕೊಂಡಿರುತ್ತೇನೆ. ದಾನ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದಾನ ಪತ್ರದಲ್ಲಿರುವ ಅಂಶಗಳು ವಾಸ್ತವಿಕ ಅಂಶಗಳು ಎಂದರೆ ಸಾಕ್ಷಿ ನ್ಯಾಯಾಲಯದ ಆದೇಶದ ನಂತರ ದಾನಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆಂದು ಹೇಳುತ್ತಾರೆ.

ನ್ಯಾಯಾಲಯದ ಆದೇಶ ದಿಃ 15.11.2021 ರಲ್ಲಿ ಆಗಿರುತ್ತದೆ ಎಂದರೆ ಸರಿ. ದಾನ ಪತ್ರದ ದಿನಾಂಕ 23.09.2021 ಆಗಿರುತ್ತದೆ ಎಂದರೆ ಸರಿ. ಲೀಲಾವತಿಯವರಿಗೂ ಈ ಆಸ್ತಿಯಲ್ಲಿ ಹಕ್ಕು ಇದೆ ಎಂದು ಹೇಳಿದ್ದು ಅವರಿಗೆ ಕರೆದುಕೊಂಡು ಬಂದು ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿ  ಮಾಡಿಸುತ್ತೇನೆಂದು ಹೇಳುತ್ತಾರೆ. ಲೀಲಾವತಿಯವರಿಗೆ ಮತ್ತು ನಮಗೆ ಯಾವುದೆ ದ್ವೇಷ ಇರುವುದಿಲ್ಲ ಸಾಕ್ಷಿ ಅವರು ಅವರ ಮನೆಯಲ್ಲಿದ್ದಾರೆಂದು ಹೇಳುತ್ತಾರೆ.

2020 ರಲ್ಲಿ ಲೀಲಾವತಿಯವರ ವಿಳಾಸ ಕಂಪ್ಲಾಪುರ ಆಗಿತ್ತು. ಕೇಸು ದಾಖಲು ಮಾಡಿದ ಸಮಯದಲ್ಲಿ ಕಂಪ್ಲಾಪುರ ವಿಳಾಸ ತೋರಿಸಿರುವುದಿಲ್ಲ. ಕಂಪ್ಲಾಪುರ ವಿಳಾಸಕ್ಕೆ ಯಾವುದೇ ನೋಟಿಸ್ ಮತ್ತು ನೊಂದಾಯಿತ ಅಂಚೆ ಕಳುಹಿಸಿಲ್ಲವೆಂದರೆ ಸರಿಯಲ್ಲ. ಪದ್ಮಾ ಮತ್ತು ಲೀಲಾವತಿಯವರು ಶರಿಕಾಗಿ ಲೀಲಾವತಿ ಅವರು ವಾಸ ಮಾಡುವ ಸ್ಥಳದ ವಿಳಾಸವನ್ನು ದಾವೆಯಲ್ಲಿ ನೀಡಿರಲಿಲ್ಲವೆಂದರೆ ಸರಿಯಲ್ಲ. ಒಟ್ಟು ಎಷ್ಟು ಕೇಸಗಳನ್ನು ಪದ್ಮಾ ಅವರು ಲೀಲಾವತಿಯವರಗೆ ಮೇಲೆ ಹಾಕಿದ್ದಾರೆಂದು ನನಗೆ ಮಾಹಿತಿ ಇಲ್ಲ. ಪದ್ಮಾವತಿ ಅವರೇ ನ್ಯಾಯಾಲಯಕ್ಕೆ ಬಂದಿದ್ದರೇ ಮಾಹಿತಿ ಹೇಳುತ್ತಿದ್ದರು ಎಂದರೆ ಸರಿ.

ಈ ಅರ್ಜಿ ಸ್ವತ್ತಿನ ಮೂಲ ಸರ್ವೆ ನಂ ಹಸಿಗೆ ಹೋಬಳಿಯ 304/1 ಆಗಿತ್ತು ಎಂದರೆ ಸರಿ. ಸದರಿ ಜಮೀನಿನಲ್ಲಿ ಕೆ.ಕೆ. ಕುಮಾರ ಮತ್ತು ವೆಂಕಟೇಶ ಅವರಿಗೆ ತಲಾ 17 ವರೆ ಗುಂಟೆ ವಿಭಾಗ ಆಗಿರುತ್ತದೆ ಎಂದರೆ ಸರಿ. ಪೂರ್ವದ 17ವರೆ ಗುಂಟೆ ಕೆ.ಕೆ. ಕುಮಾರ ಅವರಿಗೆ ಮತ್ತು ಪಶ್ಚಿಮದ 17ವರೇ ಗುಂಟೆ ವೆಂಕಟೇಶ ಅವರಿಗೆ ಬಂದಿರುತ್ತದೆ ಎಂದರೆ ಸರಿ. ವೆಂಕಟೇಶ ಅವರಿಗೆ ಬಂದ ಸ್ವತ್ತು 304/3 ಎಂದು ಪೋಡಾಗಿರುತ್ತದೆ ಎಂದರೆ ಸರಿ. ಸದರಿ ಜಮೀನು ನಿ.ಪಿ 2 ರಂತೆ ದಿಃ 18.03.2022 ರಲ್ಲಿ ಭೂ ಪರಿವರ್ತನೆ ಆಗಿರುತ್ತದೆ ಎಂದರೆ ಸರಿ.

ಭೂ ಪರಿವರ್ತನೆಗೆ ಕೆ.ಕೆ. ವೆಂಕಟೇಶ ಅವರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿ ಕೆ.ಕೆ. ವೆಂಕಟೇಶ ಮತ್ತು ಲೀಲಾವತಿಯವರು ಮಾಹಿತಿ ನೀಡಿರುತ್ತಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ ಎಂದು ಹೇಳುತ್ತಾರೆ. ಪಾರಿಕತ್ತು ಮಾಡಿಕೊಳ್ಳುವ ಸಮಯದಲ್ಲಿ ವೆಂಕಟೇಶ ಅವರ ಜೊತೆ ಅವರ ಹೆಂಡತಿ ಲೀಲಾವತಿ ಸಹ ಹಾಜರಿದ್ದರು ಎಂದರೆ ಸರಿ. ಭೂ ಪರಿವರ್ತನೆ ಆಗುವ ಸಮಯದಲ್ಲಿಯೂ ಸಹ ಅವರಿಬ್ಬರ ನಡುವೆ ಯಾವುದೇ ಭಿನ್ನಾಭಿಪ್ರಾಯ ಇರಲಿಲ್ಲವೆಂದರೆಸರಿ. ವಿಭಾಗದಲ್ಲಿ ವೆಂಕಟೇಶ ಅವರ ಹೆಸರಿಗೆ ಮಾತ್ರ ವಿಭಾಗ ಆಗಿದ್ದು ಪಹಣಿ ಪತ್ರಿಕೆ ಮಾಡುವ ಸಮಯದಲ್ಲಿ ಅವರ ಮತ್ತು ಅವರ ಹೆಂಡತಿಯ ಹೆಸರಿಗೆ ಜಂಟಿಯಾಗಿ ಬಂದಿತ್ತು ಎಂದರೆ ಸರಿ.

ಭೂ ಪರಿವರ್ತನೆಯ ಆದ ನಂತರ ಹೆಂಡತಿಯ ಒಪ್ಪಿಗೆ ಮೇರೆಗೆ ಕೆ.ಕೆ. ವೆಂಕಟೇಶ ಅವರ ಹೆಸರಿಗೆ ಮಾತ್ರ ಪಂಚಾಯಿತಿಯಲ್ಲಿ ಈ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲವೆಂದು ಹೇಳುತ್ತಾರೆ. ಸದರಿ ಮಾಹಿತಿ ಡಿಕ್ರಿ ಹೋಲ್ಡರ್ ಗೆ ಗೊತ್ತಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಪಂಚಾಯಿತಿ ಖಾತೆ ಆದ ನಂತರ ಹಾಲೊಬ್ರಿಕ್ಸ ಫ್ಯಾಕ್ಟರಿಯ ಲೈಸನ್ಸ ಅನ್ನು ಯಾರ ಹೆಸರಿಗೆ ನೀಡಿರುತ್ತಾರೆಂದು ನನಗೆ ಗೊತ್ತಿಲ್ಲ. ಪಾರಿಕತ್ತಿನಂತೆ ವೆಂಕಟೇಶ ಅವರ ಹೆಸರಿಗೆ ಬಂದ ಸ್ವತ್ತನ್ನು ದಾನ ಮಾಡುವಾಗ ಅವರ ಹೆಂಡತಿ ಲೀಲಾವತಿಯವರು ಅದನ್ನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

ಸದರಿ ಸ್ವತ್ತು ವೆಂಕೇಟಶ ಅವರ ಸ್ವತ್ತಾಗಿದ್ದರಿಂದ ಲೀಲಾವತಿಯವರು ದಾನ ಪತ್ರವನ್ನು ಪ್ರಶ್ನೆ ಮಾಡಿಲ್ಲವೆಂದರೆ ಸಾಕ್ಷಿ ಮೊದಲು ಜಂಟಿ ಖಾತೆ ಇತ್ತು ಎಂದು ಹೇಳುತ್ತಾರೆ. ದಾವೆ ಸಲ್ಲಿಸುವ ಸಮಯದಲ್ಲಿ ಭೂ ಪರಿವರ್ತನೆ ಆದ ಬಗ್ಗೆ ಡಿಕ್ರಿ ಹೋಲ್ಡರ್ ಅವರಿಗೆ ಮಾಹಿತಿ ಇತ್ತು ಎಂದರೆ ಸಾಕ್ಷಿ ನನಗೆ ಗೊತಿಲ್ಲವೆಂದು ಹೇಳುತ್ತಾರೆ. ಡಿಕ್ರಿ ಹೋಲ್ಡರ್ ಅವರಿಗೆ ಮಾಹಿತಿ ಗೊತ್ತಿತ್ತಾ ಎಂದರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲವೆಂದು ಹೇಳುತ್ತಾರೆ.

ದಾವೆ ಸಲ್ಲಿಸುವ ಸಮಯದಲ್ಲಿ ಭೂ ಪರಿವರ್ತನೆ ಆಗಿದ್ದರೂ ಸಹ ಕಂದಾಯ ಅಧಿಕಾರಿಗಳ ಕೈ ತಪ್ಪಿನಿಂದ ವೆಂಕಟೇಶ ಮತ್ತು ಅವರ ಹೆಂಡತಿಯ ಹೆಸರಿಗೆ ಪಹಣಿ ಪತ್ರಿಕೆ ಬರುತ್ತಿತ್ತು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲವೆಂದು ಹೇಳುತ್ತಾರೆ. ಲೀಲಾವತಿ ಅವರು ಪದ್ಮಾ ಅವರಿಂದ ಸಾಲವನ್ನು ಪಡೆದಿದ್ದಾರೆಂದು ಹೇಳುವ ಸಮಯದಲ್ಲಿ ಮನೆಯ ಯಜಮಾನಿಕೆಯನ್ನು ವೆಂಕಟೇಶ ಅವರು ಆಗಿದ್ದರು. ನೀಡಿದ್ದಾರೆ ಎಂದು ಹೇಳುವ ಸಾಲ ಸ್ವತ್ತನ್ನು ನೋಡಿ ನೀಡಿದ ಸಾಲವಾಗಿರುತ್ತದೆ.

ವೆಂಕಟೇಶ ಅವರಿಗೆ ನೀಡಲಾಗಿದೆ ಎನ್ನುವ ಸಾಲ ತಲುಪಿದೆಯಾ ಎಂದರೆ ಸಾಕ್ಷಿ ಲೀಲಾವತಿಯವರ ಮೂಲಕ ತಲುಪಿದೆ ಎಂದು ಹೇಳುತ್ತಾರೆ. ಅಸಲು ದಾವೆಯನ್ನು ವೆಂಕಟೇಶ ಮತ್ತು ಲೀಲಾವತಿ ಇಬ್ಬರ ಮೇಲೂ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ. ದಾವೆ ಸಲ್ಲಿಸುವ ಸಮಯದಲ್ಲಿ ಸದರಿ ಸ್ವತ್ತಿನ ಮಾಲಿಕ ಕೆ. ಕೆ. ಕುಮಾರ ಆಗಿದ್ದರು ಎಂದರೆ ಸಾಕ್ಷಿ ಕೆ.ಕೆ. ವೆಂಕಟೇಶ ಆಗಿದ್ದರು ಎಂದು ಹೇಳುತ್ತಾರೆ. ಸದರಿ ದಾವೆಯಲ್ಲಿ ದಾವಾ ಸ್ವತ್ತಿನ ಮಾಲಿಕರು ಕೆ. ಕೆ. ವೆಂಕಟೇಶ ಅವರು ಇರುತ್ತಾರೆಂದು ಹೇಳಿ ಡಿಕ್ರಿ ಪಡೆದಿರುತ್ತಾರೆಂದರೆ ಮಾಹಿತಿ ಇಲ್ಲವೆಂದು ಹೇಳುತ್ತಾರೆ.

ಲೀಲಾವತಿಯವರು ನೀವು ಕರೆದರೆ ಪ್ರಕರಣದಲ್ಲಿ ಬಂದು ಸಾಕ್ಷಿ ನುಡಿಯುತ್ತಾರೆ ವೆಂಕಟೇಶ ಮತ್ತು ಕುಮಾರ ಅವರು ಕರೆದರೆ ಬಂದು ಸಾಕ್ಷಿ ಹೇಳುವುದಿಲ್ಲವೆಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲವೆಂದು ಹೇಳುತ್ತಾರೆ. ಅಸಲು ದಾವೆ ಸಲ್ಲಿಸಿದ ಸಮಯದಲ್ಲಿ ಡಿಕ್ರಿ ಹೋಲ್ಡರ್ ಮತ್ತು ಲೀಲಾವತಿ ಅವರು ಸಂಪರ್ಕದಲ್ಲಿದ್ದು ವೆಂಕಟೇಶ ಮತ್ತು ಕುಮಾರ ಅವರು

ಸಂಪರ್ಕದಲ್ಲಿರಲಿಲ್ಲವೆಂದರೆ ಸರಿಯಲ್ಲ. ಲೀಲಾವತಿಯವರು ಆನ್ ಡಿಮ್ಯಾಂಡ್ ಪ್ರಮಿಜರಿ ನೋಟಯನ್ನು ಬರೆದುಕೊಟ್ಟಿದ್ದಾರೆಂದು ಪದ್ಮಾ ಅವರು ದಾವೆ ದಾಖಲು ಮಾಡಿರುತ್ತಾರೆ. ವೆಂಕಟೇಶ ಅವರು ಕುಮಾರ ಅವರಿಗೆ ಬರೆದುಕೊಟ್ಟ ದಾನ ಪತ್ರವನ್ನು ನೀವಾಗಲಿ ಲೀಲಾವತಿಯವರು ಆಗಲಿ ಪ್ರಶ್ನೆ ಮಾಡಿಲ್ಲವೆಂದರೆ ಸಾಕ್ಷಿ ಮಾಹಿತಿ ಇರಲಿಲ್ಲವೆಂದು ಹೇಳುತ್ತಾರೆ. ಲೀಲಾವತಿ ಮತ್ತು ಡಿಕ್ರಿ ಹೋಲ್ಡರ್ ಅವರು ಶರಿಕಾಗಿ ಮೂಲ ಮಾಲಿಕರಾದ ವೆಂಕಟೇಶ ಅವರ ಅನುಪಸ್ಥಿತಿಯಲ್ಲಿ ಆನ್ ಡಿಮ್ಯಾಂಡ್ ಪ್ರಮಿಜರಿ ನೋಟಅನ್ನು ಸೃಷ್ಟಿ ಮಾಡಿ ಮಾಡಿದ ದಾವೆ ಆಗಿರುತ್ತದೆ ಎಂದರೆ ಸರಿಯಲ್ಲ.

ಲೀಲಾವತಿ ಮತ್ತು ವೆಂಕಟೇಶ ಅವರ ನಡುವೆ ಪಾಂದತ್ಯ ಕದನ ಇದ್ದ ಕಾರಣ ವೆಂಕಟೇಶ ಅವರ ಆಸ್ತಿ ಹೋದರೆ ಹೋಗಲಿ ಎಂದು ದಾವೆಯಲ್ಲಿ ಬಾಗವಹಿಸಿಲ್ಲವೆಂದರೆ ಸರಿಯಲ್ಲ. ದಾವಾ ಸ್ವತ್ತನ್ನು ವೆಂಕಟೇಶ ಅವರು ಕುಮಾರ ಅವರಿಗೆ ದಾನ ಪತ್ರದ ಮೂಲಕ ನೀಡಿದ್ದು ಅವರೆ ಏಕ ಮಾತ್ರ ಮಾಲಿಕರು ಮತ್ತು ಸ್ವಾಧೀನದಾರರು ಆಗಿರುತ್ತಾರೆ ಎಂದರೆ ಸಾಕ್ಷಿ ಮಾಹಿತಿ ಇಲ್ಲವೆಂದು ಹೇಳುತ್ತಾರೆ. ದಾವಾ ಸ್ವತ್ತಿಗೆ ಲೀಲಾವತಿಯವರು ಮಾಲಿಕರು ಆಗದೇ ಇರುವ ಕಾರಣ ನಾವು ಸದರಿ ಸ್ವತ್ತನ್ನು Attachement ಮಾಡಲು ಆಗುವುದಿಲ್ಲವೆಂದರೆ ಸರಿಯಲ್ಲ.

ನೈಜ ಮಾಲಿಕರು ಅನುಪಸ್ಥಿತಿಯಲ್ಲಿ ಆಸ್ತಿಯನ್ನು ಖಬಳಿಸಬೇಕೆಂಬ ಉದ್ದೇಶದಿಂದ ಸಲ್ಲಿಸಿದ ಈ ಅರ್ಜಿ ಉರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ. ಅರ್ಜಿ ಸ್ವತ್ತು ಭೂ ಪರಿವರ್ತನೆ ಆದ ಬಗ್ಗೆ ದಾನವಾದ ಬಗ್ಗೆ ಮತ್ತು ತಕರಾರುದಾರರು ಸ್ವಾಧೀನದಲ್ಲಿರುವ ಬಗ್ಗೆ ಮಾಹಿತಿ ಇದ್ದರು ಸಹ ಅರ್ಜಿಯಲ್ಲಿ ದಾವಾ ಸ್ವತ್ತನ್ನು ಕೃಷಿ ಜಮೀನನ್ನು ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ಡಿಕ್ರಿ ಹೋಲ್ಡರ ಅವರು ನ್ಯಾಯಾಲಯಕ್ಕೆ ಬಂದಲ್ಲಿ ಈ ಎಲ್ಲಾ ಅಂಶಗಳ ನಿಜಾಂಶ ಗೊತ್ತಾಗುತ್ತದೆಂದು ನಾನು ವಿದ್ಯಾವಂತನಾಗಿದ್ದು ತಿರುಚಿ ಸಾಕ್ಷಿ ನುಡಿಯಲು ಗೊತ್ತಿರುತ್ತದೆಂದು ನನಗೆ ಅಧಿಕಾರ ಪತ್ರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾಯಿಯ ಆರೋಗ್ಯ ಸರಿ ಇಲ್ಲವೆಂದು ತೋರಿಸಲು ಯಾವುದೇ ದಾಖಲೆಗಳು ಹಾಜರುಪಡಿಸಿಲ್ಲವೆಂದರೆ

ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ,

ಕುಣಿಗಲ್